## ಸದ್ದು ಅಡಗುವವರೆಗೆ...

ಹೊಸದಾಗಿ ಮನೆಗೆ ಬಂದ ಸೊಸೆಗೆ ಅತ್ತೆ ಹೇಳಿದಳು. 'ನೋಡಮ್ಮ, ನಾನು ಸ್ವಲ್ಪ ಆಚೆ ಹೋಗಿ ಬರುವೆ. ಬೆಣ್ಣೆ ಕಾಯಿಸಲು ಇಟ್ಟಿದ್ದೀನಿ. ನೋಡಿ, ಆರಿಸು' ಎಂದು. ಸೊಸೆ, 'ಎಷ್ಟು ಹೊತ್ತಿನತನಕ ಕಾಯಿಸಬೇಕು ಅತ್ತೆ?' ಎಂದು ಕೇಳಿದಳು. 'ಸದ್ದು ಅಡಗುವವರೆಗೆ ಕಾಯಿಸು' ಎಂದು ಹೇಳಿ ಅತ್ತೆ ಹೊರಗೆ ಹೋದಳು. ಮನೆಯ ಪಕ್ಕದಲ್ಲಿ ಮದುವೆ ಕಾರ್ಯಕ್ರಮವಿತ್ತು. ರಾತ್ರಿಯವರಗೆ ಸದ್ದು–ಗದ್ದಲ ನಿಲ್ಲಲೇ ಇಲ್ಲ. ಸೊಸೆ ಬೆಣ್ಣೆ ಕಾಯಿಸಲು ಇಟ್ಟಿದ್ದ ಒಲೆಯನ್ನು ಆರಿಸಲೇ ಇಲ್ಲ. ಅತ್ತೆ ಬಂದು ನೋಡಿದಾಗ ಬೆಣ್ಣೆ ತುಪ್ಪವಾಗಿ, ತುಪ್ಪ ಸೀದು ಹೋಗಿ, ಪಾತ್ರ ಕರಕಲಾಗಿತ್ತು. ಯಾಕೆ ಒಲೆ ಆರಿಸಲಿಲ್ಲ ಎಂದು ಕೇಳಿದರೆ ಸೊಸೆ, 'ಸದ್ದು ಅಡಗಲೇ ಇಲ್ಲವಲ್ಲ ಅತ್ತೆ' ಎನ್ನುವುದೇ.

ಬೆಣ್ಣೆ ಕಾಯಿಸುವಾಗ ಗುಡುಗುಡು ಸದ್ದು ಬರುತ್ತಿರುತ್ತದೆ. ಅದು ತುಪ್ಪವಾಗುತ್ತ ಬಂದಾಗ ಆ ಸದ್ದು ನಿಂತು ಹೋಗುತ್ತದೆ. ಆಗ ಅದು ತುಪ್ಪವಾಗಿದೆ ಅಂತ ಅರ್ಥ. ಈ ಅರ್ಥದಲ್ಲಿ ಅತ್ತೆ ಹೇಳಿದ ಮಾತನ್ನು ಸೊಸೆ ತನ್ನದೇ ರೀತಿಯಲ್ಲಿ ಅರ್ಥೈಸಿಕೊಂಡಿದ್ದಳು. ಕಾರಣ ತುಪ್ಪ ಸೀದು ಹೋಗಿತ್ತು.



**ಶೋಭಾ ಸಿದ್ದಣ್ಣವರ್**

## ಗೋವು ತಂದ ಪೇಚು!



ನೆಂಟರ ಗೃಹ ಪ್ರವೇಶ ಕಾರ್ಯಕ್ರಮದ ಸಂದರ್ಭ. ಉಪಸ್ಥಿತರಿದ್ದ ನೆಂಟರಿಗೆ ಒಬ್ಬೊಬ್ಬರಿಗೂ ಒಂದೊಂದು ದೇವರ ಫೋಟೊ, ನೀರು ತುಂಬಿದ ಕಳಶ(ಗಂಗೆ), ಅಕ್ಕಿ, ಬೆಲ್ಲ, ತೆಂಗಿನ ಕಾಯಿ, ಅರಿಶಿನ ಕುಂಕುಮ, ತೊಟ್ಟಿಲು, ಹಾಸಿಗೆ, ಹಾಲು, ಪಾತ್ರೆಗಳು ಮುಂತಾಗಿ ಕೊಟ್ಟು ಗೃಹ ಪ್ರವೇಶಕ್ಕೆ ಅಣಿಯಾಗಿ ಪುರೋಹಿತರ ಆಣತಿಗೆ ಕಾಯುತ್ತಿದ್ದೆವು. ಪುರೋಹಿತರು 'ಗೋವು... ಗೋವು' ಎಂದರು. ತಕ್ಷಣವೇ ಅಲ್ಲಿದ್ದ ನಮ್ಮ ನೆಂಟರ ಪುಟ್ಟ ಬಾಲಕ ಅಲ್ಲಿದ್ದ ಉತ್ತರ ಕನ್ನಡದ ಕುಮಟಾದ ನೆಂಟರೊಬ್ಬರನ್ನು ಕರೆದುಕೊಂಡು ಬಂದು, 'ಗೋವು... ಗೋವು...' ಎಂದು ಪುರೋಹಿತರ ಬಳಿ ನಿಲ್ಲಿಸಿದ!. ಕೊಂಕಣಿಯಲ್ಲಿ 'ಗೋವು' ಎಂದರೆ ಪತಿ!. ಅವರ ಪತ್ನಿ ಬಂದವರಿಗೆಲ್ಲಾ 'ಮಗೆಲೆ ಗೋವು' (ಇವರು ನನ್ನ ಪತಿ) ಎಂದು ಪರಿಚಯಿಸಿದ್ದನ್ನು ಆತ ಗಮನಿಸಿದ್ದ.

**ನಗರ ಗುರುದೇವ್ ಭಂಡಾರ್ಕರ್**